ಅಲ್ಲಿಂದ ಮುಂದೆ, ನನ್ನ ಬಳಿ ಕಪ್ಪು ಬಣ್ಣದ ಮೇಲೆ ಕೆಂಪು ಗೆರೆಗಳಿದ್ದ ಶರ್ಟ್ ಇತ್ತು. ಆಗ ನಮ್ಮ ಕಾಲದಲ್ಲಿ ಲಂಗಗಳ ಮೇಲೆ ಜೇಬಿಲ್ಲದ ಶರ್ಟ್ ಮಾದರಿಯಲ್ಲಿ ಕಾಲರ್ ಇಟ್ಟು ಹೊಲಿಸಿಕೊಳ್ಳುತ್ತಿದ್ದೆವು. ಅದನ್ನೇ ಧರಿಸಿ ಯಾವುದೇ ನಿರೀಕ್ಷೆಯಿಲ್ಲದೆ ಮೊದಲ ಬಾರಿಗೆ ಒಂದು ಅಂತರಕಾಲೇಜು ಪ್ರಬಂಧ ಸ್ಪರ್ಧೆಗೆ ಹೋಗಿದ್ದೆ. ಬಹುಮಾನ ವಿತರಣೆಯ ಸಮಾರಂಭಕ್ಕೆ ಹಿಂದಿನ ದಿನ ಅಂಚೆಯಲ್ಲಿ ಬಂದ ಆಹ್ವಾನ ಪತ್ರಿಕೆಯ ಹಿಂದೆ ಟೈಪ್ ಮಾಡಿದ ಸಂದೇಶ 'ನಿಮಗೆ ಮೂರನೇ ಬಹುಮಾನ ಬಂದಿದೆ' ಸರಿ, ಈ ಅಂಗಿಯೂ ಲಕ್ಕಿ ಕ್ಯಾಟಗರಿಗೆ ಸೇರಿಯಾಯ್ತು.

ಒಂದು ಬಟ್ಟೆ ತೊಟ್ಟಾಗ ಅನಿರೀಕ್ಷಿತವಾದ ಲಾಭವೋ ಸಡಗರವೋ ದೊರಕಿತೆಂದರೆ ಅದನ್ನು ಲಕ್ಕಿ ಗುಂಪಿಗೆ ಸೇರಿಸುವುದು ಚಟದಂತೆಯೇ ಆಗಿಹೋಯ್ತು. ಪದವಿ ಪರೀಕ್ಷೆಗಳಿಗೆ ಎರಡೇ ಲಂಗಗಳನ್ನು ಬದಲಾಯಿಸಿ ಬರೆದು ಉತ್ತಮ ಶ್ರೇಣಿ ಗಳಿಸಿದ್ದೆ. ಇಲ್ಲಿ ನನ್ನ ಉಡುಗೆಗೂ ಫಲಿತಾಂಶಕ್ಕೂ ಸಂಬಂಧವಿದೆಯೇ? ಇದೇನು ಭ್ರಾಂತಿ, ಚಿತ್ತ ವಿಕಾರ, ಎನ್ನುವವರಿಗೆ ನನ್ನಲ್ಲಿ ಉತ್ತರವಿಲ್ಲ. ಇದು ಮುಂದುವರೆದು ಇಲಾಖೆಯಲ್ಲಿ ಆಫೀಸರ್ ಪರೀಕ್ಷೆಯವರೆಗೂ ಎಳೆಯಿತು. ಎರಡೇ ಸೀರೆ ನಾಲ್ಕು ದಿನಗಳಿಗೂ! ಪದೋನ್ನತಿಯಾಯ್ತಲ್ಲ... ಅದಕ್ಕಿಂತ ಪ್ರೂಫ್ ಬೇಕೇ?

ಈ ಹುಚ್ಚು, ಬರೀ ಉಡುಗೆಗೆ ಮಾತ್ರ ಸೀಮಿತವಾಗದೆ ನಾನು ಕೊಂಡ ವಿಧವಿಧವಾದ ಕೈಚೀಲಗಳು, ಫ್ಯಾನ್ಸಿ ಪರಿಕರಗಳು ಮುಂತಾದವುಗಳಿಗೆ ವ್ಯಾಪಿಸತೊಡಗಿತು. ಏನೆಲ್ಲಾ ಹೊಸತು ಬಂದರೂ ಅದನ್ನು ಮೊದಲು ಬಳಸಿದ ದಿನ ಸರಿಯಿತ್ತೆಂದರೆ ಸರಿ. ಹಾಗಿಲ್ಲವಾದರೆ ಅಬ್ಬಬ್ಬಾ ಎಂದರೆ ಇನ್ನೊಂದು ಅವಕಾಶ ಅಲ್ಲಿಗೂ ಕಿರಿಕಿರಿ ಅನ್ನಿಸಿದಲ್ಲಿ ಯಾರಿಗಾದರೂ ಧಾರಾಳವಾಗಿ ಕೊಟ್ಟುಬಿಡುತ್ತಿದ್ದೆ, 'ಒಳ್ಳೆಯದಾಗಲಿ' ಎಂದು ಹರಸಿ!

ಈ ಮೇನಿಯಾ ಇನ್ನೂ ಒಂದು ಹೆಜ್ಜೆ ದಾಟಿ ಆಭರಣಗಳವರೆಗೂ ವ್ಯಾಪಿಸಿತ್ತು. ಒಮ್ಮೆ ನೋಡಲು ಚೆನ್ನಾಗಿದೆಯೆಂದು ಕೆಂಪು ಕಲ್ಲಿನ ಓಲೆ ಖರೀದಿಸಿದ್ದೆ. ತೊಟ್ಟ ಎರಡು ಮೂರು ದಿನ ಅದೇಕೋ ಮನಸ್ಸಿಗೆ ಸಮಾಧಾನವಿಲ್ಲ. ಇತ್ತ ಮನೆ ಅತ್ತ ಆಫೀಸು ಎಲ್ಲೂ ನೆಮ್ಮದಿಯ ವಾತಾವರಣವಿಲ್ಲ. ಏನೋ ತಳಮಳ, ಪಿರಿಪಿರಿ ಹೇಳಲಾರೆ, ಅನುಭವಿಸಲಾರೆ. ಅಪ್ಪ ಇದ್ದಕ್ಕಿದಂತೆ ಹಾಸಿಗೆ ಹಿಡಿದರು. ಯಾಕೋ ಹೆಚ್ಚು ರಿಸ್ಕ್ ಬೇಡ ಎಂದು ತಡಮಾಡದೆ ಅಂಗಡಿಗೆ ಮರಳಿಸಿದೆ. ನನ್ನ ಮಗಳು, ಪದವಿ ಓದುವಾಗ, ಜಾತಕದ ಪ್ರಕಾರ ಪುಷ್ಯರಾಗ ಕೊಂಡರೆ 'ಓಹೋ' ಎನ್ನುವ ಭವಿಷ್ಯವಿರುತ್ತದೆ ಎಂದು ಹೇಳಿದ್ದನ್ನು ಕೇಳಿ ಆ ಪ್ರಯೋಗವನ್ನು ಮಾಡಿಯಾಯ್ತು. ಅಂಗಡಿ ಬಿಟ್ಟ ಕೂಡಲೇ ಎಡವಟ್ಟು! ನೆಟ್ಟಗಿರದ ದಾರಿಯಲ್ಲಿ ಎಡವಿ ಹೆಬ್ಬೆಟ್ಟು ರಕ್ತಮಯ!

ಅಂದು ರಾತ್ರಿ ಅವಳ ಗೆಳತಿಯಿಂದ ಫೋನು. ಇವಳ ಅತಿ ಇಷ್ಟದ ಸಂಖ್ಯಾಶಾಸ್ತ್ರದಲ್ಲಿ ನಿರೀಕ್ಷಿಸಿದ್ದ



ಕೊನೆ ಉಸಿರು ಇರುವ ತನಕ ರಾಜಕಾರಣ ಮಾಡುವ ಆಸೆ ವ್ಯಕ್ತ ಪಡಿಸಿದ್ದಾರೆ... ಮತಬಾಂಧವರಿಗೋಸ್ಕರ ಅವಕಾಶ ವಂಚಿತರಾಗದಿರಲಿ... ಡಾಕ್ಟರ್!

70 ಅಂಕಗಳ ಬದಲು 17! (ಇದನ್ನು ಮರು ಮೌಲ್ಯಕ್ಕೆ ಹಾಕಿ ಸರಿಪಡಿಸಿಕೊಂಡೆವೆನ್ನಿ) ಮರುದಿನವೇ ಪುಷ್ಯರಾಗ ಅಂಗಡಿಗೆ ವಾಪಸ್ ಮಾಡಿ ನಿರಾಳರಾದೆವು. ಅದೇ ಲಕ್ಕಿಯೆನಿಸಿದ್ದ ಮುತ್ತು ಹವಳದ ಓಲೆಯೊಂದನ್ನು ಅದರ ಪಕಳೆ ಕಿತ್ತು ಬರುವವರೆಗೂ ಬಳಸಿ ಕೊನೆಗೆ ತೀರಾ ಮಂಕಾಗಿ ಕಾಣುವಾಗ ಅದನ್ನು ಕೊಟ್ಟು ಬೇರೆ ಕೊಂಡಿದ್ದೆ.

ನನ್ನಲ್ಲೊಂದು ವಿಪರೀತ ಲಕ್ಕಿ ಗುಂಪಿಗೆ ಸೇರಿದ ಚಿಕ್ಕ ಸ್ಲಿಂಗ್ ಮಾದರಿ ಕೈಚೀಲವಿತ್ತು. ಅದರ ಜಿಪ್ ಹಾಳಾಗಿ ಮೇಲ್ಮೈ ಹರಿಯತೊಡಗಿದಾಗ ಇನ್ನೊಂದನ್ನು ಬಳಸಬೇಕಾದ ಅನಿವಾರ್ಯ. ಸರಿ, ಅದನ್ನೇ ಮೊದಲ ಬಾರಿಗೆ ನೀರಿನ ಬಾಟಲ್ ಕರವಸ್ತ್ರ ಇತ್ಯಾದಿ ಸಹಿತ ಹೆಗಲಿಗೇರಿಸಿ ಮೊಮ್ಮಗನನ್ನು ಒಂದೇ ದಿನದ ಎರಡು ಸ್ಪರ್ಧೆಗೆ ಕರೆದೊಯ್ದಿದ್ದೆ. ಎರಡರಲ್ಲೂ ಒಳ್ಳೆಯ ಪೈಪೋಟಿ. ಕೊನೆಗೆ ಎರಡರಲ್ಲೂ ಮೂರನೇ ಸ್ಥಾನ ಸಿಕ್ಕಾಗ ನನ್ನ ಖುಷಿ ಹೇಳತೀರದು. ಮರುದಿನ ಮೂರನೇ ಸ್ಪರ್ಧೆಯಲ್ಲೂ ಎರಡನೆಯ ಸ್ಥಾನ! 'ಈ ಬ್ಯಾಗ್ ಲಕ್ಕಿ' ಎಂದು ಮನೆಯಲ್ಲಿ ಡಿಕ್ಲೇರ್ ಮಾಡಿದ್ದೆ. ಹಾಗೆಯೇ, ಇನ್ನೊಂದು ಉಡುಗೊರೆಯಾಗಿ ನನ್ನ ಕಪಾಟನ್ನು ಅಲಂಕರಿಸಿದ್ದ ಜಂಬದ ಚೀಲ. ಅದನ್ನು ಬಳಸಿದ ಮೊದಲ ದಿನವೇ ಅನಿರೀಕ್ಷಿತ ಗೌರವ! ಈಗ ಅದರ ಹಿಡಿಕೆಯ ಚರ್ಮ ಹೊರಬರುತ್ತಿದೆ. ಆದರೆ ಅದಕ್ಕಿನ್ನೂ **substitute** ಸಿಕ್ಕಿಲ್ಲ ಎಂಬುದು ನನ್ನ **worry**!

ಈ ಲಕ್ಕಿ ಎಂಬ ಗೀಳು ನನ್ನ ಮಗಳಿಗೂ ಮುಟ್ಟಿದ್ದು, ವಿವಾಹದ ನಂತರ ಲಾ ಪದವಿಗೆ ಓದುವಾಗ... ಮತ್ತೆ ಇದೇ ಅಸ್ತ್ರದ ಬಳಕೆ ರಿಪೀಟ್. ಲಕ್ಕಿ ಡ್ರೆಸ್, ಲಕ್ಕಿ ಪೆನ್, ಲಕ್ಕಿ ಬ್ಯಾಗ್ ದಯೆ, ಪದವಿಯೊಂದಿಗೆ ಪ್ರಾಕ್ಟೀಸ್ ಮಾಡಲೂ ಪ್ರಮಾಣಪತ್ರ ಸಿಕ್ಕಿತ್ತು, ಅನಾಯಾಸವಾಗಿ ಎಂಬುದು ಅವಳ ಅಂಬೋಣ!

ನನ್ನ ಬಳಿ ಇರುವ ಫ್ಯಾನ್ಸಿ ಸಂಗ್ರಹದಲ್ಲಿ ಸುಮಾರು ಎರಡು ದಶಕಗಳಷ್ಟು ಹಳೆಯದಾದ, ಕೆಂಪು ಬಣ್ಣದ ಮೇಲೆ ಚಿತ್ತಾರವಿರುವ ಮರದ ಬಳೆ ಇದೆ. ಸ್ವಲ್ಪ ಮಾಸಿದೆ ಎನ್ನುವುದನ್ನು ಬಿಟ್ಟರೆ ಯಾವ ಊನವೂ ಇಲ್ಲ. ಅದನ್ನು ಧರಿಸಿದರೆ ಕೆಲಸ ಹೀಗೆ ಹೋಗಿ ಹಾಗೆ ಬರುವುದು ಅಷ್ಟು ಸಲೀಸು!

ಇನ್ನು ಹೊರಗೆ ಹಾಕಿಕೊಳ್ಳಲು ಇರುವ ಚಪ್ಪಲಿ ವಿಷಯದಲ್ಲೂ ಬಲು ಜಾಗ್ರತೆ. ಒಂದು ಹೊಸ ಚಪ್ಪಲಿಯನ್ನು ಅದರ ಬಣ್ಣ ವಿನ್ಯಾಸಕ್ಕೆ ಮಾರುಹೋಗಿ ಕೊಂಡೆ. ಯಾಕೋ ಮೊದಲ ನಡಿಗೆಯಲ್ಲೇ ಅಸಮಾಧಾನ. ಗೂಡಿನಿಂದ ಸರಿಸಿಬಿಟ್ಟೆ. ಈಗಿರುವುದು ಸಾಮಾನ್ಯ ಎಲ್ಲ ದಿರಿಸಿಗೂ ಹೊದಿಕೆಯಾಗುತ್ತದೆ ಮತ್ತು ಹೋದೆಡೆ ಹಾಯಾಗಿರುವಷ್ಟು ಮನೋಲ್ಲಾಸ!

ಹೋದ ವರ್ಷ ಮೊಮ್ಮಗ ಪಕ್ಕದ ಬಡಾವಣೆಯಲ್ಲಿ ರಾಜ್ಯೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಭಾಗಿಯಾಗಲು ಸಂಜೆ 4ಕ್ಕೆ ಹೊರಟು 7 ಗಂಟೆಗೆ 'ಇನ್ನು ಶುರುವಾಗಿಲ್ಲ' ಎಂದು ಬುಸುಗುಡುತ್ತ ಬಂದು 'ಹೊಸ ಶರ್ಟ್ ಅಂತ ಹಾಕ್ಕೊಂಡೆ, ಹೀಗಾಯ್ತು' ಎಂದು ಬಿಚ್ಚಿಟ್ಟ. ಮುಂದಿನ ಅರ್ಧ ಗಂಟೆಯಲ್ಲಿ ಅವನ ಪಟಾಲಂ ಬಂದು 'ಬೇಗ ಹೊರಡು, ಸ್ಪರ್ಧೆಗಳು ಪ್ರಾರಂಭವಾಗಲಿದೆ' ಎಂದು ನ್ಯೂಸ್ ಕೊಟ್ಟಾಗ ತನಗೆ ಲಕ್ಕಿ ಅನ್ನಿಸಿದ ಶರ್ಟ್ ಧರಿಸಿ ಹೋದವ ರಾತ್ರಿ ಹತ್ತೂವರೆಗೆ ಬಂದ, ಕೊರಳಲ್ಲಿ ಗೋಲ್ಡ್ ಮತ್ತು ಕಂಚಿನ (ಬಣ್ಣದ) ಮೆಡಲ್ ಹಾರಗಳು!

ಕಳೆದ ವಾರ, ಮಗಳಿಗೆ ಹೊಸ ಕುರ್ತಾ ಕೊರಿಯರ್ ಮೂಲಕ ಬಂತು. ಅಳತೆ ನೋಡಲು ಟ್ಯಾಗ್ ಸಮೇತ ಹಾಕಿಕೊಳ್ಳಲು ಪ್ರಯತ್ನಿಸಿರುವ ಸಮಯ ಅಳಿಯಂದಿರ ಫೋನ್ ವಿನಾಕಾರಣ ಯಾರ ಮೇಲಿನ ಸಿಟ್ಟು ಇವಳಲ್ಲಿ ತೋಡಿಕೊಂಡರಂತೆ. 'ಬೇಡಮ್ಮ ಆರಂಭದಲ್ಲೇ ಗೋಳು ಕರೆ' ಎನ್ನುತ್ತಾ ತಕ್ಷಣವೇ ಆ ಕುರ್ತಾ ರಿಟರ್ನ್ ಹಾಕಿದಳು.

'ಯಾಕೋ ಮಂಗಳವಾರ ನನಗೆ ಲಕ್ಕೇ ಇಲ್ಲ, ಎಲ್ಲ ಸಬ್ಜೆಕ್ಟ್‌ಗಳು ಇವೆ' ಎಂದು ಮೊಮ್ಮಗನ ಗೊಣಗಾಟವಾದರೆ, ಅದೇ ಮಂಗಳವಾರ ನನಗೆ ಲಕ್ಕಿ ಹಿಡಿದ ಕೆಲಸಗಳೆಲ್ಲ ಕೈಗೂಡುತ್ತವೆ. ಬಣ್ಣಗಳಲ್ಲಿ ಕೆಂಪು, ಕಂದು, ನೀಲಿ ಯಾವುದಾದರು ಆದೀತು, ಆದರೆ ಹಳದಿ ಗಿಣಿ ಹಸಿರು ಹತ್ತಿರಕ್ಕೂ ಸೇರಿಸೆನು. ಸಾಮಾನ್ಯವಾಗಿ ಕಪ್ಪು ಎಂದರೆ ಹೆದರುವವರ ಮಧ್ಯೆ ನನ್ನ ಮಗಳು ಅಪವಾದ ಅವಳಿಗೆ ಅದು ಲಕ್ಕಿ.

ನೀವು ಮಾಡುವ ಕೆಲಸದ ಹಿಂದೆ ಶ್ರಮವಿದೆ, ತಕ್ಕ ಫಲವಿದೆ ಉಡುಗೆ ತೊಡುಗೆ ಏನು ಮಾಡೀತು? ಎಂದು ಹುಬ್ಬೇರಿಸುವ, ಕೀಟಲೆ ಮಾಡುವ, ಅಯ್ಯೋ ಅರೆಹುಚ್ಚು ಎಂದು ಕನಿಕರಿಸಿ ಕುಹಕವಾಡುವ ಮಂದಿ ಇಲ್ಲದಿಲ್ಲ. ನಮಗೆ ಅದರ ಲಕ್ಷ್ಯವಿಲ್ಲ. ಲಕ್ಕಿ ಅಥವಾ ಅನ್ ಲಕ್ಕಿ ಎನ್ನುವುದು ಭ್ರಮೆ, ಮನೋವಿಕಾರ ಎಂದು ಏನೆಲ್ಲಾ ವೈಜ್ಞಾನಿಕವಾಗಿ ವಿಶ್ಲೇಷಿಸಿದರೂ ಒಮ್ಮೆ ತಲೆಯಲ್ಲಿ ಕೂತರೆ ಅಷ್ಟು ಬೇಗ ಹೊರಹೋಗದು. ಮಾನಸಿಕ ಸ್ವಾಸ್ಥ್ಯ ಹಿಗ್ಗಲೂ ಕುಗ್ಗಲು ಕಾರಣವಾಗುವುದಂತೂ ನಿಜ. ಹೀಗಾಗಿ ನಮಗೆ ಸಾಧಕವಾದದ್ದು, ನಿಭಾಯಿಸತಕ್ಕ ಲಕ್ಕಿಗಳು ಇರಲಿ ಅದಕ್ಕೇನಂತೆ? ಅವರವರ ಭಾವಕ್ಕೆ... ಅಷ್ಟೇ ಅಲ್ಲವೇ!